**ಈ ಸಾಕ್ಷಿಯನ್ನು ದಿನಾಂಕಃ 09.04.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2ನೇ ಎದುರುದಾರರ ಪರ ವಕೀಲರಿಂದ**

ನನ್ನ ಗಂಡ ನನ್ನ ಮೈದುನನ ಜೊತೆ ಮೋಟಾರ್ ಬೈಕಿನಲ್ಲಿ ಹೋಗುತ್ತಿದ್ದರು ಎಂದರೆ ಸರಿ. ನನ್ನ ಮೈದ ಓಡಿಸುತ್ತಿದ್ದ ಮೋಟಾರು ಬೈಕು ಯಾರಿಗೆ ಸೇರಿತ್ತೆಂದು ಗೊತ್ತಿಲ್ಲ. ನನ್ನ ಮೈದ ಓಡಿಸುತ್ತಿದ್ದ ಮೋಟಾರು ಬೈಕು ಅವರ ಬಳಿಯೇ ಇದೆ. ಮೋಟಾರು ಬೈಕು ಅವರಿಗೆ ಸೇರಿದ್ದು ಎಂದರೆ ಸರಿ. ಬೆಳಿಗ್ಗೆ 9.00 – 9.30 ಅಪಘಾತವಾಗಿರುತ್ತದೆ. ನಾನು ಅಪಘಾತವನ್ನು ನೋಡಿರುವುದಿಲ್ಲ. ನಾನು ಘಟನಾ ಸ್ಥಳಕ್ಕೆ ಹೋದಾಗ ನನ್ನ ಗಂಡ ತೀರಿಹೋಗಿದ್ದರು. ನಂತರ ನನ್ನ ಗಂಡನ ಶವವನ್ನು ನಮ್ಮ ಊರಿಗೆ ತಂದಿದ್ದರು ಎಂದರೆ ಸರಿ. ಅಪಘಾತದ ಸ್ಥಳದಲ್ಲಿ ಬೇರೆ ಜನರು ಇದ್ದರು. ಪೋಲಿಸರು ನಮ್ಮ ಮನೆಯಲ್ಲಿ ಶವ ಪಂಚನಾಮೆ ಮಾಡಿದರು ಎಂದರೆ ಸರಿ. ಪರಿಹಾರ ಪಡೆಯುವ ಉದ್ದೇಶದಿಂದ ಅಪಘಾತದಿಂದ ನನ್ನ ಗಂಡ ಮೃತಪಟ್ಟಿದ್ದಾರೆಂದು ನಾನು ಮತ್ತು ನನ್ನ ಮೈದ ಸೇರಿ ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ನಿಪಿ–8 ರಲ್ಲಿ ಯುಡಿಆರ್ ಎಂದುಬರೆದಿದ್ದನ್ನು ಕಾಟು ಹೊಡೆದು ಸಿ ಆರ್ ಎಂದು ಬರೆದಿದ್ದಾರೆ ಎಂದರೆ ಸರಿ. ನಿಪಿ–8ನ್ನು ಸೃಷ್ಟಿ ಮಾಡಿ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಊರಿನಲ್ಲಿ ರಾಜೂನಾಯಕ ಬಿನ್ ರಾಮುನಾಯಕ ಇದ್ದಾರೆ ಎಂದರೆ ಸರಿ. ಅವರು ನನಗೆ ಸಂಬಂಧಿಕರಲ್ಲ. ನಾವು ಅವರು ಚೆನ್ನಾಗಿದ್ದೇವೆ ಎಂದರೆ ಸರಿ. ರಾಜೂನಾಯಕರವರು ತಮ್ಮ ತನಿಖೆಯ ವರದಿಯಲ್ಲಿ ನಾನು ಹೇಳುವಂತ ಅಪಘಾತವಾಗಿಲ್ಲ ಎಂದು ಹೇಳಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಮೈದ ಓಡಿಸಿ ಯಾವುದೇ ಅಪಘಾತವಾಗಿಲ್ಲ ನನ್ನ ಗಂಡ ಬೇರೆ ಕಾರಣದಿಂದ ಮೃತಪಟ್ಟಿದ್ದು ಪರಿಹಾರಕ್ಕಾಗಿ ಸುಳ್ಳು ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಅತ್ತೆ ಮಾವ ನನ್ನ ಜೊತೆಯಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ರೇಷನ್ ಕಾರ್ಡು ಕೊಟ್ಟಿರುವುದಿಲ್ಲ. ರೇಷನ್ ಕಾರ್ಡನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಬಹುದು. ನನ್ನ ಗಂಡ ತಿಂಗಳಿಗೆ 40 ಸಾವಿರ ಸಂಪಾದನೆ ಮಾಡುತ್ತಿದ್ದ ಬಗ್ಗೆ ದಾಖಲೆಯನ್ನು ಹಾಜರು ಪಡಿಸಿಲ್ಲ. ನಮ್ಮ ಮನೆಯ ಸಂಪೂರ್ಣ ಜವಾಬ್ದಾರಿ 3ನೇ ಅರ್ಜಿದಾರರು ವಹಿಸಿದ್ದರು ಎಂದರೆ ಸುಳ್ಳು. ನನ್ನ ಗಂಡನಿಗೆ ಅಪಘಾತವಾಗದೇ ಇದ್ದರೂ ಸುಳ್ಳು ದಾಖಲೆ ಸೃಷ್ಟಿ ಮಾಡಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆದ್ದರಿಂದ 2ನೇ ಎದುರುದಾರರು ಯಾವುದೇ ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿದೆ.
ಓ ಹೇ ಕೇ ಸರಿ ಇದೆ.

(ಸುನೀತ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕೊಳ್ಳೇಗಾಲ.